ಶ್ರೀ ಪಿ. ಎಂ. ಬಂಗಿ.—ರಬಕವಿ, ಬನಹಟ್ಟಿ ಮುನಿಸಿಪಾಲಿಟಿಯವರು ಅವರ ವಂತಿಗೆ ಎಂದು ಸುಮಾರು ಒಂದು ಲಕ್ಷದ ಮೇಲೆ ಹಣ ಕೊಟ್ಟಿದ್ದರೂ ಕೂಡ ಇದುವರೆಗೆ ಯಾವ ಪ್ಲಾನು ಹಾಗೂ ಎಸ್ಟಿಮೇಟುಗಳು ಕೂಡ ಮಾಡಲಿಲ್ಲ. ಹೀಗೆ ಮುನಿಸಿಪಾಲಿಟಿಯವರು ಕೊಟ್ಟಿರುವ ಹಣ ಉಪಯೋಗವಾಗದೆ ಇದ್ದರೆ ಅವನ್ನು ಅವರಿಗೆ ವಾಪಸು ಕೊಡಲು ಸರಕಾರದವರು ಯೋಚನೆ ಮಾಡುತ್ತಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಈಗಾಗಲೇ ಸುಮಾರು ಎರಡು ಕೋಟಿ ಒಂದು ಲಕ್ಷದ ಅರನೂರು ರೂಪಾಯಿಗಳ ಪ್ಲಾನು ಮತ್ತು ಎಸ್ಟಿಮೇಟುಗಳು ಸರಕಾರಕ್ಕೆ ಬಂದು ಇದರ ಅಪ್ರೂವಲ್ ಕೂಡ ಆಗಿದೆ. ಇದನ್ನು 1973—74ರ ಬಡ್ಜೆಟ್ಟಿನಲ್ಲಿ ಪೊದಲು ಸೇರಿಸಿರಲಿಲ್ಲ. 1974—75ರ ಬಡ್ಜೆಟ್ಟಿನಲ್ಲಿ ಸೇರಿಸಬೇಕೆಂದು ಆರ್ಡರ್ ಮಾಡಲಾಗಿದೆ. ಹಾಗೆ ಬಡ್ಜೆಟ್ಟಿನಲ್ಲಿ ಒಂದು ವೇಳೆ ಸೇರಿಸದೇ ಇದ್ದರೆ ಇದರಲ್ಲಿ ಎಷ್ಟು ಪಂತಿಗೆ ಬಂದಿದೆ ಅಷ್ಟು ಹಣವನ್ನು ಪಯೋಗಿಸಿಕೊಂಡು ಇದರ ಬಗ್ಗೆ ಆಸ್ಪತ್ರೆಗಳನ್ನು ಕಟ್ಟಲು ಪ್ರಯತ್ನ ಮಾಡಿ ಉಳಿದ ಹಣ ಬಂದಾಗ ಇದರ ಇತರ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಆಗಲೇ ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ.—ಸಾರ್ವಜನಿಕರು ಅವರಾಗಿಯೇ ಮುಂದೆ ಬಂದು ಆಸ್ಪತ್ರೆಗಳಿಗಾಗಿ ಅವರ ವಂತಿಗೆ ಕೊಟ್ಟು ಆಸ್ಪತ್ರೆಗಳನ್ನು ಕಟ್ಟಿಸಬೇಕೆಂದು ಕೇಳಿದರೆ ಸರಕಾರದವರು ಅವರಿಗೆ ಎಲ್ಲ ಸ್ಕೀಮ್ಸ್‌ಗಳನ್ನೂ ಒದಗಿಸಿಕೊಡುತ್ತೀರಾ ? ಮತ್ತು ಇದುವರೆಗೆ ಎಷ್ಟು ಜನ ಸರಕಾರಕ್ಕೆ ಆ ರೀತಿ ಹಣ ಕೊಟ್ಟಿದ್ದಾರೆ ?

ಶ್ರೀ ಎಚ್. ಸಿದ್ಧವೀರಪ್ಪ.—ನನ್ನ ಬಳಿ ಒಂದು ದೊಡ್ಡ ಪಟ್ಟಿಯೇ ಇದೆ. ಬೇಕಾದಷ್ಟು ಜನರು ಸರಕಾರಕ್ಕೆ ಮುಂದೆ ಬಂದು ಹಣ ಕೊಟ್ಟು ಆಸ್ಪತ್ರೆ ಕಟ್ಟಬೇಕೆಂದು ಮನವಿ ಮಾಡಿದ್ದಾರೆ. ಇದರ ಪಟ್ಟಿಯನ್ನು ಸಭೆಯ ಮೇಜಿನ ಮೇಲೆ ಇಡುತ್ತೇನೆ. ಬೇಕಾದರೆ ಇದರ ಎಲ್ಲ ವಿವರಗಳನ್ನೂ ಮಾನ್ಯ ಸದಸ್ಯರು ಇಲ್ಲಿ ನೋಡಬಹುದು. ಮಾನ್ಯ ಸದಸ್ಯರಿಗೆ ಗೊತ್ತಿರಬಹುದು ಈಗ ಅವರು ಕೊಡುವ 15 ಸಾವಿರ ರೂಪಾಯಿಗಳಿಗೆ ಒಂದು ಗೋಡೆ ಕೂಡ ಆಗುವುದಿಲ್ಲ. ಇದಕ್ಕಾಗಿ ನಾವು ಅವರಲ್ಲಿ ಹೇಳುತ್ತಿದ್ದೇವೆ. ಅವರವರ ಊರಿನಲ್ಲಿ ಒಂದು ಸಣ್ಣ ಹಂಚಿನ ಮನೆ ಡಾಕ್ಟರ ವಾಸಕ್ಕೆ ಕಟ್ಟಿಸಿಕೊಟ್ಟರೆ ಮುಂದೆ ಅಲ್ಲಿಗೆ ಒಂದು ಆಸ್ಪತ್ರೆ ಕೊಡುವ ಬಗ್ಗೆ ಸರಕಾರ ಮುಂದೆ ಬರುತ್ತದೆ ಎಂದು ತಿಳಿಸಿದ್ದೇವೆ.

9-30 A.M.

ಶ್ರೀ ಕೆ. ರಂಗಕಟಪ್ಪ.—ತಾಲ್ಲೂಕು ಬೋರ್ಡ್ ಮತ್ತು ಮುನಿಸಿಪಾಲಿಟಿಗಳು ಒಟ್ಟಿಗೆ ಸೇರಿ ಕೊಂಡು ಅದನ್ನು ಸಾರ್ವಜನಿಕ ಆಸ್ಪತ್ರೆಯಂತೆ ಕಟ್ಟಬೇಕೆಂದು ಸರ್ಕಾರ ಅವರಿಗೆ ಆದೇಶ ಕೊಡುತ್ತದೆಯೆ ?

ಶ್ರೀ ಎಚ್. ಸಿದ್ಧವೀರಪ್ಪ.—ಆ ರೀತಿಯಾಗಿ ಆದೇಶವನ್ನು ಕೊಡುವುದಕ್ಕಾಗುವುದಿಲ್ಲ. ಸ್ಥಳದ ಅನುಕೂಲತೆಗಳನ್ನು ನೋಡಿಕೊಂಡು ಅವರೇ ಮುಂದೆ ಬರಬೇಕು.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

QUESTIONS FOR ANSWERS ON THE DAY
(but not taken up)

**Construction of Quarters to Doctors and Staff at Meerasabihally Village, Challakere Taluk.*

51. Sri V. MASIYAPPA (Challakere) :—

Will the Minister for Health be pleased to state :—

(*a*) whether the Village Panchayat of Meerasabihally village in Challakere Taluk has given site to Health Department for construction of Doctor's quarters and other staff quarters ;

(*b*) whether the plans and estimates of these quarters have been prepared by the P.W.D. ;

(*c*) whether these plans and estimates have been sanctioned by the Government ?

Sri H. SIDDAVEERAPPA (Minister for Health) .—

(*a*) The V.P. has resolved to donate a site free of cost for construction of quarters at Meerasabihally in Challakere Taluk.

(*b*) The District Health and F. P. Officer, Chittradurga has been addressed to obtain Plans and estimates and also T.D.B. Resolution to meet 50 per cent cost for the construction of staff quarters.

(*c*) Plans and estimates and T.D.B. resolutions are still awaited. Further action will be taken after receipt of the same.

**Upgrading of Local Fund Dispensary of Meerasabihally Village in Challakere Taluk.*

52. Sri V. MASIYAPPA (Challakere) .—

Will the Minister for Health be pleased to state :—

(*a*) whether representations have been made by the people of Meerasabihally in Challakere Taluk to upgrade the Local Fund Dispensary in their village ;

(*b*) whether any report has been submitted to Government by the District Health Officer in the matter ;

(*c*) whehter it is not a fact that similar dispensaries in Muthugadur, B. Durga and Mayakonda have been up-graded recently ;

(*d*) whether posting of M.B.B.S. Doctor to this Dispensary is under the consideration of the Government ?

Sri H. SIDDAVEERAPPA (Minister for Health) .—

(*a*) Yes.
(*b*) No.
(*c*) Yes.
(*d*) No.